August 2022
ವಿತ್ತ ಸಂಚಿಕೆ

# INSPIRE INDIA



ಶರಣ್ ಪಾಟೀಲ್
ಆರ್ಥಿಕ ತಜ್ಞ


## ಸಲಹೆ ನಮ್ಮದು ಹೂಡಿಕೆ ನಿಮ್ಮದು

**INSPIRE INDIA WEALTH PRIVATE LTD.** @ 65, 'Surasa Enclave' 1st floor, Puttanna Road, Gandhi Bazar
Basvanagudi, Bengaluru 560004, Ph: +91 8042129917, 9035414414. **Mail:** info@inspireindiafs.com **Website:** www.inspireindiafs.com



ಒಂದು ಪಕ್ಕಾ ಯೋಜನೆ ಹೊಂದಿರುವ ಈಡಿಯಟ್ ಯಾವ ಯೋಜನೆಯೂ ಶ್ರೇಷ್ಠ ಉದ್ಯಮಿಯನ್ನು ಬೀಟ್ ಮಾಡುವ ತಾಕತ್ತು ಹೊಂದಿರುತ್ತಾನೆ.

–ವಾರೆನ್ ಬಫೆಟ್



ಯಶಸ್ಸು ಸಾಧಿಸುವ ಸಂಕಲ್ಪವಿದ್ದರೆ ಮೊದಲು ಎಲ್ಲವನ್ನೂ ಬಿಟ್ಟು ಹೊರಬನ್ನಿ. ಮನೆಯಲ್ಲಿ ಖಾಲಿ ಕುಳಿತುಕೊಳ್ಳದಿರಿ.

–ರತನ್ ಟಾಟಾ



ಯಾವತ್ತೂ ನಿಮಗೊಂದು ದೊಡ್ಡ ಗುರಿ, ದೊಡ್ಡ ಕನಸಿರಬೇಕು. ಹಾಗಂತ ಅವುಗಳನ್ನು ಹಂತ ಹಂತವಾಗಿಯೇ ನಿರ್ವಹಿಸುತ್ತ ಹೋಗಬೇಕು, ಒಮ್ಮೆಗೇ ಅಲ್ಲ.

–ಚಂದಾ ಕೋಚರ್

# ನಿಮ್ಮ ಬಂಡವಾಳ ಪಟ್ಟಿ ಕಡೆಗಿರಲಿ ಗಮನ

ಒಳ ಪುಟ ನೋಟ

ಸರಿ ಇದೆಯೇ ನಿಮ್ಮ **ಮ್ಯುಚ್ಯುಯಲ್ ಫಂಡ್**? 3



ವಿದೇಶ ಪ್ರವಾಸದ ಜೊತೆಗಿರಲಿ **ವಿದ್ಯಾರ್ಥಿ ಪ್ರಯಾಣ ವಿಮೆ** 5



ನೀವು ಹೂಡಿದ ಬಂಡವಾಳದ ಸಾಮ್ರಾಜ್ಯವಿದೆಯಲ್ಲ, ಅದು ಯಾವತ್ತೂ ಅಮೂಲ್ಯವಾದುದು. ಅದನ್ನು ಕಟ್ಟಲು ನೀವು ವಹಿಸಿದ ಶ್ರಮ ಮತ್ತು ಸಮಯಕ್ಕೆ ಬೆಲೆ ಕಟ್ಟಲು ಸಾಧ್ಯವೇ ಇಲ್ಲ. ಒಬ್ಬ ಹೂಡಿಕೆದಾರನಾಗಿ ನಿಮಗೆ ಪ್ರತಿಯೊಂದು ಹಂತ, ಪ್ರತಿಯೊಂದು ಹೆಜ್ಜೆ ಕೂಡ ಬಹುಮುಖ್ಯ. ಹಣಕಾಸಿನ ವಿಚಾರದಲ್ಲಿ ನಿಮಗೊಂದು ಗುರಿಯಿರುತ್ತದೆ. ಈ ಸಂದರ್ಭದಲ್ಲಿ ಎದುರಾಗುವ ಅಪಾಯವನ್ನು ಹೇಗೆ ನಿಭಾಯಿಸಬೇಕು, ಅದಕ್ಕೆ ಬೇಕಾಗುವ ಸಂಯಮ, ಕಾಲದ ವ್ಯಾಪ್ತಿ, ನಿರೀಕ್ಷಿತ ಆದಾಯವನ್ನೆಲ್ಲ ಒಂದೊಂದಾಗಿ ಲೆಕ್ಕ ಹಾಕುತ್ತ ಬಂದಿರುತ್ತೀರಿ. ಅದರ ಆಧಾರದಲ್ಲಿಯೇ ನಿಮ್ಮದೇ ಆದ ಹೂಡಿಕೆಯ ಸಾಮ್ರಾಜ್ಯವನ್ನು ಕಟ್ಟಿರುತ್ತೀರಿ ಮತ್ತು ಅದನ್ನು ನಿಮಗೆ ತೃಪ್ತಿಯಾಗುವ ರೂಪದಲ್ಲಿ ವಿಂಗಡಣೆ ಮಾಡಿರುತ್ತೀರಿ. ಆದರೆ ನಿಜವಾಗಿ ಅದಷ್ಟೇ ಸಾಕಾಗುವುದಿಲ್ಲ. ಇಡೀ ಕಥೆಯಲ್ಲಿ ಬಂಡವಾಳ ಪಟ್ಟಿಯನ್ನು ಸೃಷ್ಟಿಸುವುದು ಕೇವಲ ಒಂದು ಭಾಗ ಮಾತ್ರ. ಆ ಕೆಲಸ ಮುಗಿದ ಬಳಿಕ ಅಂತಹ ಬಂಡವಾಳ ಪಟ್ಟಿಯಲ್ಲಿ ಯಾವುದು ಎಷ್ಟು ಸಮರ್ಪಕವಾಗಿ ಕೆಲಸ ಮಾಡುತ್ತಿದೆ ಎಂದು ಆಗಾಗ ಪರಿಶೀಲಿಸುವುದು ಅತ್ಯಗತ್ಯ.

ಹಾಗಾದರೆ ಈ ಬಂಡಾವಳ ಪಟ್ಟಿಯ ಪರಿಶೀಲನೆ ಎಂದರೆ ಏನು? ಒಬ್ಬ ಹೂಡಿಕೆದಾರನಾಗಿ ಕಾಲಕಾಲಕ್ಕೆ ತಾನು ಮಾಡಿದ ಹೂಡಿಕೆಗಳ ಪರಿಶೀಲನೆ




ಮಾಡಲೇಬೇಕಾ? ಈ ಲೇಖನದಲ್ಲಿ ಈ ಎಲ್ಲ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ:

### ಬಂಡವಾಳ ಪಟ್ಟಿಯ ಪರಿಶೀಲನೆ ಎಂದರೆ ಏನು?

ನೀವು ಯಾವ ಯಾವ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆಯನ್ನು ಮಾಡಿದ್ದೀರಿ, ಅದರ ಮೌಲ್ಯಮಾಪನ ಮಾಡುವುದು ಹಾಗೂ ಅಪಾಯವನ್ನು ಜೀರ್ಣಿಸಿಕೊಳ್ಳುವ ಮಾರ್ಗದಲ್ಲಿ ಅದು ಇದೆಯೇ ಎಂಬುದನ್ನು ಪರಿಶೀಲಿಸುವುದು. ಜೊತೆಗೆ ನಿಮ್ಮ ಹೂಡಿಕೆಯ ಉದ್ದೇಶಗಳು ಅಥವಾ ಗುರಿಗಳ ಹಾದಿಯಲ್ಲಿ ಅದು ಸಾಗುತ್ತಿದೆಯೆ ಎಂದು ಪರಿಶೀಲಿಸುವುದೇ ಬಂಡವಾಳ ಪಟ್ಟಿಯ ಪರಿಶೀಲನೆ. ಇದರಿಂದ ನಿಮ್ಮ ಹೂಡಿಕೆಯ ಕಾರ್ಯತಂತ್ರವು ಮಾರುಕಟ್ಟೆಗೆ ತಕ್ಕುನಾಗಿದೆ ಮತ್ತು ನಿರೀಕ್ಷಿತ ದಾರಿಯಲ್ಲಿ ಉತ್ತಮ ನಿರ್ವಹಣೆಯನ್ನು ಅದು ತೋರುತ್ತಿದೆ

ಎಂಬುದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಕಾಲಕಾಲಕ್ಕೆ ಈ ರೀತಿಯ ಪರಿಶೀಲನೆಯನ್ನು ಮಾಡುವುದರಿಂದ ನೀವು ಮಾಡಿದ ಆರಂಭಿಕ ಆಸ್ತಿ ಹಂಚಿಕೆಯ ಯೋಜನೆ ಈಗಲೂ ಸಶಕ್ತವಾಗಿದೆಯೇ ಎಂದು ತಿಳಿದುಕೊಳ್ಳಬಹುದು. ಹಾಗಿಲ್ಲದೇ ಹೋದರೆ ನಿಮ್ಮ ಉದ್ದೇಶಿತ ಆಸ್ತಿ ಹಂಚಿಕೆಯನ್ನು ಮರಳಿ ಪಡೆಯುವ ದೃಷ್ಟಿಯಿಂದ ಬಂಡವಾಳ ಪಟ್ಟಿಯನ್ನು ಮರುಹೊಂದಾಣಿಕೆ ಮಾಡಲು ದಾರಿ ಸುಗಮವಾಗುತ್ತದೆ.

ಮಾರುಕಟ್ಟೆ ಎಲ್ಲಾ ಕಾಲಕ್ಕೂ ಒಂದೇ ಗತಿಯಲ್ಲಿ ಇರುವುದಿಲ್ಲ ಎಂಬುದು ನಿಮಗೆ ಗೊತ್ತಿದೆ. ಯಾವ ಕಾಲದಲ್ಲಿಯೂ ಅದು ಏರುಪೇರಾಗಬಹುದು. ಬಂಡವಾಳ ಪಟ್ಟಿಯನ್ನು ಸಕಾಲದಲ್ಲಿ ಪರಾಮರ್ಶೆಗೆ ಒಳಪಡಿಸುವುದರಿಂದ ನೀವು ಉದ್ದೇಶಿಸಿದ ಸ್ಥಿರ ಆದಾಯವನ್ನು ಪಡೆಯಲು ಸಾಧ್ಯವಾಗುತ್ತದೆ ಹಾಗೂ ಮಾರುಕಟ್ಟೆ ಯಾವುದೇ



ಏರಿಳಿತಗಳನ್ನು ಕಂಡರೂ ಕೂಡ ನಿಮ್ಮ ಹಣಕಾಸಿನ ಗುರಿಗಳನ್ನು ಸಾಧಿಸಲು ತೊಂದರೆಯಾಗುವುದಿಲ್ಲ. ಮಾರುಕಟ್ಟೆ ಯಾವತ್ತೂ ಏರುಗತಿಯಲ್ಲಿದ್ದಾಗ ನೀವು ಮಾಡಿದ ಬಂಡವಾಳ ಹೂಡಿಕೆಗಳಿಂದ ಆದಾಯ ಗಳಿಸುವುದನ್ನು ಕಾಣುತ್ತೀರಿ. ಅಂತಹ ಸಂದರ್ಭದಲ್ಲಿ ಅವುಗಳ ಪರಿಶೀಲನೆ ಮಾಡದೇ ಸುಮ್ಮನಿರಬಹುದು. ಅದು ಸುಲಭ ಕೂಡ. ಹಾಗಂತ ನೀವು ಸಕಾಲದಲ್ಲಿ ನಿಮ್ಮ ಬಂಡವಾಳ ಪಟ್ಟಿಯನ್ನು ಪರಿಶೀಲನೆ ಮಾಡುವುದನ್ನು ನಿರ್ಲಕ್ಷಿಸಿದರೆ ಅದು ಅಪಾಯವನ್ನು ಹೆಚ್ಚಿಸುತ್ತ ಹೋಗುತ್ತದೆ. ಜೊತೆಗೆ ಮಾರುಕಟ್ಟೆ ಇಳಿಮುಖವಾಗಿದ್ದ ಸಂದರ್ಭದಲ್ಲಿ ನೀವು ಮಾಡಿದ ಹೂಡಿಕೆಗಳು ಅಪಾಯಕ್ಕೆ ಒಳಗಾಗುತ್ತವೆ.

ನೀವು ನಿಮ್ಮ ಬಂಡವಾಳ ಪಟ್ಟಿಯನ್ನು ಪರಿಶೀಲಿಸುವ ಅವಧಿಯಲ್ಲಿ ವ್ಯತ್ಯಯವಾಗಬಹುದು. ಅದು ಸಂಪೂರ್ಣವಾಗಿ ನಿಮ್ಮ ಗುರಿಗಳು ಮತ್ತು ಹೂಡಿಕೆಯ ಪಟ್ಟಿಯನ್ನು ಅವಲಂಬಿಸಿರುತ್ತದೆ. ಕನಿಷ್ಠ ವರ್ಷಕ್ಕೊಮ್ಮೆಯಾದರೂ ಪರಿಶೀಲನಾ ಪ್ರಕ್ರಿಯೆಯನ್ನು ನಡೆಸುವ ಪರಿಪಾಠವನ್ನು ಇಟ್ಟುಕೊಳ್ಳುವುದು ಉತ್ತಮ. ಪರಿಶೀಲನೆ ಮಾಡುವುದು ಎಂದರೆ ಪ್ರತಿ ಬಾರಿ ನೀವು ಖರೀದಿ ಮತ್ತು ಮಾರಾಟವನ್ನು ಮಾಡಬೇಕಾದ ಅಗತ್ಯವೇನೂ ಇರುವುದಿಲ್ಲ ಎಂಬುದನ್ನು ನೆನಪಿಟ್ಟುಕೊಳ್ಳಿ. ಅದು ಬಂಡವಾಳ ಪಟ್ಟಿಯಲ್ಲಿನ ಮರುಹೊಂದಾಣಿಕೆ ಅಥವಾ ಬದಲಾವಣೆಗೆ ಕಾರಣವಾಗಬಹುದು ಅಥವಾ ಆಗದೇ ಇರಬಹುದು. ಹಾಗಂತ ಇಂತಹ ಪರಿಶೀಲನೆಯ ಸಂದರ್ಭದಲ್ಲಿ ಅತ್ಯಲ್ಪ ಅವಧಿಯ ಕಳಪೆ ನಿರ್ವಹಣೆ ಕಂಡುಬಂದ ಮಾತ್ರಕ್ಕೆ ಯಾವುದೇ ಹೂಡಿಕೆಯಿಂದ ನಿರ್ಗಮಿಸುವ ಬಗ್ಗೆ ನಿರ್ಧಾರ ಕೈಗೊಳ್ಳಬೇಕಾದ ಅಗತ್ಯವೇನೂ ಇರುವುದಿಲ್ಲ. ಬದಲಾಗಿ ನಿರ್ದಿಷ್ಟವಾದ ಹೂಡಿಕೆಯ ವಿಚಾರದಲ್ಲಿ ಏನಾದರೂ ವ್ಯತ್ಯಯವಾಗಿದೆಯೇ ಎಂಬುದನ್ನು ಗಮನಿಸಬೇಕು. ನೀವು ಹೂಡಿದ ಬಂಡವಾಳದ ವಿವಿಧ ಕ್ಷೇತ್ರಗಳನ್ನು ಪರಿಶೀಲಿಸುವುದು ಎಂದರೆ ನಿಮ್ಮ ಪಟ್ಟಿಗೆ ಕತ್ತರಿ ಪ್ರಯೋಗ ಮಾಡುವುದೇ ಅದರ ಮುಖ್ಯ ಉದ್ದೇಶವಲ್ಲ ಎಂಬುದನ್ನು ನೆನಪಿಟ್ಟುಕೊಳ್ಳಿ.

**ಯಾಕೆ ಈ ಪರಿಶೀಲನೆ:** ಕಾಲಕಾಲಕ್ಕೆ ತಾವು ಮಾಡಿದ ಹೂಡಿಕೆ ಹೇಗೆ ಕೆಲಸ ಮಾಡುತ್ತಿದೆ ಎಂಬುದನ್ನು ಪರಿಶೀಲನೆ ಮಾಡಲಿಕ್ಕೆ ಅನೇಕ ಕಾರಣಗಳಿರುತ್ತವೆ. ಅಂತಹ ಕಾರಣಗಳ ಬಗೆಗೆ ಒಂದು ದೃಷ್ಟಿ ಹಾಯಿಸೋಣ ಬನ್ನಿ.

ಆಸ್ತಿ ವಿಂಗಡಣೆಯ ಮಿಶ್ರಣವನ್ನು ಕಾಯ್ದುಕೊಳ್ಳಲು: ನಿಮಗೆ ತಿಳಿದಿರುವಂತೆ ಆಸ್ತಿ ವಿಂಗಡಣೆ ಎಂದರೆ ನಿಮ್ಮ ಒಟ್ಟು ನಿಧಿಯನ್ನು ನಾನಾ ಹೂಡಿಕೆಗಳಲ್ಲಿ ಹಂಚಿಕೆ ಮಾಡುವುದು. ಉದಾಹರಣೆಗೆ ಒಬ್ಬ ಹೂಡಿಕೆದಾರ ಹತ್ತು ಲಕ್ಷ ರೂ. ಹೂಡಿಕೆಯನ್ನು ಮಾಡುತ್ತಾನೆ. ಸಾಧಾರಣವಾಗಿ ಅಪಾಯವನ್ನು ಎದುರಿಸುವ ಸಾಮರ್ಥ್ಯವನ್ನು ಹೊಂದಿರುವವನಾಗಿ ಆತ ಷೇರು ಮತ್ತು ಸಾಲದ ನಿಧಿಗಳಲ್ಲಿ 50ಃ50ರ ಅನುಪಾತದಲ್ಲಿ ಹೂಡಿಕೆಯನ್ನು ಮಾಡುತ್ತಾನೆ. ವರ್ಷದ ಅವಧಿಯಲ್ಲಿ ಆತನ ನಿಧಿಗಳಲ್ಲಿನ ಎನ್‌ಎವಿಯಲ್ಲಿ ಏರುಪೇರು ಉಂಟಾಗುತ್ತದೆ. ವರ್ಷದ ಕೊನೆಯಲ್ಲಿ ಹೂಡಿಕೆದಾರನ ಆಸ್ತಿ ವಿಂಗಡಣೆಯು ಷೇರು ಮತ್ತು ಸಾಲದ ನಿಧಿಯಲ್ಲಿ 65ಃ35ರ ಅನುಪಾತದಲ್ಲಿರುತ್ತದೆ. ಇಂತಹ ಸಂದರ್ಭದಲ್ಲಿ ಮೂಲ ಆಸ್ತಿ ಹಂಚಿಕೆಯಲ್ಲಿ ಯಾವುದೇ ಸತ್ವವಿರುವುದಿಲ್ಲ. ಆತನ ಬಂಡವಾಳ ಪಟ್ಟಿಯಲ್ಲಿರುವ ಈಕ್ವಿಟಿ ಭಾಗವು ಅಪಾಯಕ್ಕೆ ತಕ್ಕಂತೆ

> **ನೀವು ಮಾಡಿದ ಹೂಡಿಕೆಗಳ ಬಗ್ಗೆ ಆಗಾಗ ಪರಿಶೀಲನೆ ಮಾಡುತ್ತಿದ್ದರೆ ಆ ಹೂಡಿಕೆಗಳು ಈಗಲೂ ನಿಮ್ಮ ಗುರಿಗಳೊಂದಿಗೆ ತಳಕುಹಾಕಿಕೊಂಡಿವೆಯೇ ಎಂಬುದನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.**

ಇರುವುದಿಲ್ಲ. ಹಾಗಾಗಿ ಹೂಡಿಕೆದಾರನು ಯಾವತ್ತೂ ಷೇರಿನಿಂದ ಸಾಲದ ನಿಧಿಗೆ ವರ್ಗಾಯಿಸುವ ಮೂಲಕ ಆಸ್ತಿ ಹಂಚಿಕೆಯನ್ನು ಗರಿಷ್ಠ ಮಟ್ಟದಲ್ಲಿ ಮಾಡಬೇಕು.

**ವೈಯಕ್ತಿಕ ವಿದ್ಯಮಾನಗಳಿಗೆ ತಕ್ಕಂತೆ:** ನೀವು ನಿಮ್ಮ ಜೀವನದಲ್ಲಿ ಹೊಸ ಹೊಸ ಹೆಜ್ಜೆಗಳನ್ನಿಟ್ಟು ಮುಂದುವರಿಯುತ್ತಿರುವಾಗ ನಿಮ್ಮ ಹಣಕಾಸಿನ ಗುರಿಗಳು ಬದಲಾಗುತ್ತಲೇ ಇರುತ್ತವೆ. ಜೀವನದ ಮಟ್ಟದಲ್ಲಿ ಬದಲಾವಣೆ, ಮದುವೆ ಮತ್ತು ಹೆಚ್ಚುವರಿ ಹಣಕಾಸು ಬೇಡಿಕೆಗಳು ಹಾಗೂ ಅವಲಂಬಿತರ ಹಣಕಾಸು ನಿರ್ವಹಣೆ ಮುಂತಾದವುಗಳನ್ನು ಸೇರಿಸಬೇಕಾದ ಅಗತ್ಯ ಉಂಟಾಗಬಹುದು ಅಥವಾ ಕೆಲವು ಗುರಿಗಳನ್ನು ಕೈಬಿಡಬೇಕಾಗಿ ಬರಬಹುದು. ಉದಾಹರಣೆಗೆ ನೀವು ನಿಮ್ಮ 25ನೇ ವಯಸ್ಸಿನಲ್ಲಿ ಹಣಕಾಸು ಯೋಜನೆಯನ್ನು ರೂಪಿಸಲು ಆರಂಭ ಮಾಡಿದ್ದರೆ ಮಕ್ಕಳ ಶಿಕ್ಷಣ, ಅವರ ಮದುವೆ, ನಿಮ್ಮ ನಿವೃತ್ತಿ ನಂತರದ ಜೀವನ ಇತ್ಯಾದಿ ಗುರಿಗಳ ಬಗ್ಗೆ ಯೋಚನೆ-ಯೋಜನೆ ಮಾಡದೇ ಇರಬಹುದು.

ಒಂದು ವೇಳೆ ನೀವು ಮಾಡಿದ ಹೂಡಿಕೆಗಳ ಬಗ್ಗೆ ಆಗಾಗ ಪರಿಶೀಲನೆ ಮಾಡುತ್ತಿದ್ದರೆ ಆ ಹೂಡಿಕೆಗಳು ಈಗಲೂ ನಿಮ್ಮ ಗುರಿಗಳೊಂದಿಗೆ ತಳಕುಹಾಕಿಕೊಂಡಿವೆಯೇ ಎಂಬುದನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಹಾಗಾಗಿ ಇಂತಹ ಬಂಡವಾಳ ಪಟ್ಟಿಯ ಪರಿಶೀಲನೆಯ ಮೂಲಕ ನಾನಾ ಆಸ್ತಿ ವರ್ಗಗಳಿಗೆ ಹಂಚಿಕೆ ಮಾಡಲು ನಿಮಗೆ ಸಾಕಷ್ಟು ಅವಕಾಶವನ್ನು ಒದಗಿಸುತ್ತದೆ. ಅದರಿಂದ ನಿಮ್ಮ ಹೂಡಿಕೆಗಳು ನಿಮ್ಮ ಅಗತ್ಯಗಳನ್ನು ಪೂರೈಸುವಂತಿರುತ್ತವೆ ಮತ್ತು ಅಪಾಯಗಳನ್ನು ಕೂಡ ತಪ್ಪಿಸುತ್ತವೆ.

**ಮಾರುಕಟ್ಟೆ ಚಲನೆಯ ಲಾಭ:** ಷೇರು ಮಾರುಕಟ್ಟೆ ಯಾವತ್ತೂ

ನೀವು ಅಂದುಕೊಂಡಂತೆ ಇರುವುದಿಲ್ಲ. ಏರಿಳಿತಗಳು ಸಾಮಾನ್ಯ. ಹಾಗಾಗಿ ನೀವು ಮಾಡಿದ ಹೂಡಿಕೆಗಳ ಬಗ್ಗೆ ಕಾಲಕಾಲಕ್ಕೆ ಕಣ್ಣಾಡಿಸುವುದರಿಂದ ಅದರ ಚಲನೆಯ ಗತಿಯನ್ನು ಅಂದಾಜಿಸಲು ಸಾಧ್ಯವಾಗುತ್ತದೆ. ಉದಾಹರಣೆಗೆ ಸದ್ಯೋಭವಿಷ್ಯದಲ್ಲಿ ಈಕ್ವಿಟಿ ಮಾರುಕಟ್ಟೆ ಉತ್ತಮ ನಿರ್ವಹಣೆಯನ್ನು ತೋರುತ್ತಿದೆ ಎಂಬ ನಿರೀಕ್ಷೆ ನಿಮಗಿದ್ದರೆ ಈಕ್ವಿಟಿ ನಿಧಿಯ ತೂಕವನ್ನು ಹೆಚ್ಚು ಮಾಡುವ ಕೆಲಸಕ್ಕೆ ಕೈಹಾಕಲು ಅನುಕೂಲವಾಗುತ್ತದೆ. ಅದೇ ರೀತಿಯಲ್ಲಿ ಷೇರು ಮಾರುಕಟ್ಟೆಯಲ್ಲಿ ಕರಡಿ ಕುಣಿತ ಜೋರಾಗಿದೆ ಅನ್ನಿಸಿದರೆ ನೀವು ನಿಮ್ಮ ಹೂಡಿಕೆಯನ್ನು ಸಾಲದ ನಿಧಿಗಳಲ್ಲಿ ಅಧಿಕಗೊಳಿಸುವ ಬಗ್ಗೆ ಗಮನ ಹರಿಸಬಹುದಾಗಿದೆ.

**ತೆರಿಗೆ ಉದ್ದೇಶಗಳು:** ತೆರಿಗೆ ಯೋಜನೆಗಳು ನಿಮ್ಮ ಅಷ್ಟೂ ಹೂಡಿಕೆ ಪ್ರಕ್ರಿಯೆಯ ಅವಿಭಾಜ್ಯ ಅಂಗ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಹಾಗಾಗಿ ನಿಮ್ಮ ಒಟ್ಟಾರೆ ತೆರಿಗೆ ಹೊರೆಯನ್ನು ತಗ್ಗಿಸಬೇಕಾದರೆ ಅದಕ್ಕೆ ತಕ್ಕಂತೆ ನೀವು ಮಾಡಿದ ಹೂಡಿಕೆಗಳಲ್ಲಿ ಹೊಂದಾಣಿಕೆ ನಡೆಸಲು ಇರುವ ದಾರಿಗಳ ಬಗ್ಗೆ ಯೋಚನೆ ಮಾಡಬೇಕು. ಆ ಕಾರ್ಯ ಬಂಡವಾಳ ಪಟ್ಟಿಯ ಪರಿಶೀಲನೆಯಿಂದಾಗುತ್ತದೆ. ಉದಾಹರಣೆಗೆ, ತೆರಿಗೆ ಉದ್ದೇಶದ ಕಾರಣಕ್ಕೆ ನೀವು ನಿರ್ದಿಷ್ಟವಾದ ಷೇರುಗಳನ್ನು ಹೊಂದಿಲ್ಲದೇ ಇರಬಹುದು. ಆಗ ಅದು ಉತ್ತಮ ಹೂಡಿಕೆ ಕಾರ್ಯತಂತ್ರವಾಗಿರುವುದಿಲ್ಲ.

**ಕಳಪೆ ನಿರ್ವಹಣೆಯ ಯೋಜನೆಗಳು:** ನೀವು ನಿರಂತರವಾಗಿ ಕಳಪೆ ನಿರ್ವಹಣೆಯನ್ನು ತೋರುವ ಮ್ಯುಚ್ಯುಯಲ್ ಫಂಡ್ ಯೋಜನೆಯನ್ನು ಹೊಂದಿರುವ ಸಾಧ್ಯತೆಯಿರುತ್ತದೆ. ಬಂಡವಾಳ ಪಟ್ಟಿಯ ಪರಾಮರ್ಶೆ ಕೆಲಸದಿಂದ ಸುದೀರ್ಘ ಅವಧಿಯಿಂದ ಉತ್ತಮ ನಿರ್ವಹಣೆ ತೋರದೇ ಇರುವ ಯೋಜನೆಗಳನ್ನು ಗುರುತಿಸಲು, ಅವು ಹೆಚ್ಚು ಅಪಾಯದ ದಾರಿಯಲ್ಲಿಯೇ ನಡೆದಿದೆ ಎಂಬುದನ್ನು ಪತ್ತೆ ಮಾಡಲು ಅನುಕೂಲವಾಗುತ್ತದೆ. ಅವುಗಳ ಸ್ಥಾನದಲ್ಲಿ ನಿಮ್ಮ ಒಟ್ಟಾರೆ ಬಂಡವಾಳ ಪಟ್ಟಿಯನ್ನು ಸುಧಾರಿಸುವ ಮ್ಯುಚ್ಯುಯಲ್ ಫಂಡ್‌ಗಳನ್ನು ಖರೀದಿ ಮಾಡಲು ಈ ಪರಾಮರ್ಶೆ ದಾರಿ ಮಾಡುತ್ತದೆ.

**ಒಟ್ಟಾರೆಯಾಗಿ:** **ನಾನಾ ಆಸ್ತಿ ವರ್ಗಗಳನ್ನು ಆಯ್ಕೆ ಮಾಡಿಕೊಂಡು ಅವುಗಳಲ್ಲಿ ಹೂಡಿಕೆ ಮಾಡುವುದಷ್ಟೇ ನಮ್ಮ ಕೆಲಸವಾಗಬಾರದು. ಅದರಿಂದ ಅರ್ಧ ಕೆಲಸ ಮಾತ್ರ ಮಾಡಿದಂತಾಗುತ್ತದೆ. ನೀವು ಮಾಡುವ ಹೂಡಿಕೆಗಳನ್ನು ಹೇಗೆ ಅತ್ಯಂತ ಎಚ್ಚರಿಕೆಯಿಂದ ಆಯ್ಕೆ ಮಾಡುವುದರಿಂದ ಭವಿಷ್ಯದಲ್ಲಿ ಅವು ಯಾವ ರೀತಿ ನಿರ್ವಹಣೆಯನ್ನು ತೋರುತ್ತವೆ ಎಂಬುದರ ಬಗ್ಗೆ ಭರವಸೆ ನೀಡಲು ಸಾಧ್ಯವಿಲ್ಲ. ಯಾಕೆಂದರೆ ಮಾರುಕಟ್ಟೆಯ ಒಟ್ಟಾರೆ ಸ್ವರೂಪದಿಂದಾಗಿ ನಿಮ್ಮ ಬಂಡಾವಳ ಪಟ್ಟಿಯ ಮೇಲೆ ಅದು ಪ್ರಭಾವವನ್ನು ಬೀರಬಹುದು. ಹಾಗಾಗಿ 'ನೀವೇ ಕೊಡಿಟ್ಟ ನಿಧಿ ನಿಮಗಾಗಿ ಕೆಲಸ ಮಾಡುತ್ತಿದೆಯೇ?' ಎಂಬುದನ್ನು ಆಗಾಗ ಪರಿಶೀಲಿಸಿ ನೋಡುವುದು ಅತ್ಯಗತ್ಯ. ಇಂತಹ ಪ್ರಕ್ರಿಯೆಯಿಂದ ನಿಮ್ಮ ಹೂಡಿಕೆಯ ಪಯಣ ಸರಿಯಾಗಿ ನಡೆಯುತ್ತಿದೆ ಮತ್ತು ನೀವು ನಿಮ್ಮ ಹಣಕಾಸು ಗುರಿಗಳನ್ನು ಅಪೇಕ್ಷಿತ ಸಮಯದ ಚೌಕಟ್ಟಿನಲ್ಲಿಯೇ ಮುಟ್ಟಲು ಸಾಧ್ಯವಾಗುತ್ತಿದೆ ಎಂಬುದು ಖಾತರಿಯಾಗುತ್ತದೆ.**



# ಸರಿ ಇದೆಯೇ ನಿಮ್ಮ ಮ್ಯುಚ್ಯುಯಲ್ ಫಂಡ್?

ಯಾರೇ ಆಗಲಿ ಯಾಕೆ ಹೂಡಿಕೆ ಮಾಡುತ್ತಾರೆ? ಹಾಗೆ ಹೂಡಿಕೆಯನ್ನು ಮಾಡುವುದರಿಂದ ಹಣಕಾಸು ದೃಷ್ಟಿಯಿಂದ ಸ್ವತಂತ್ರವಾಗಿರಬಹುದು ಎಂಬ ಉದ್ದೇಶದಿಂದ. ಇಂದಿನ ಚಲನಶೀಲ ವಿಶ್ವದಲ್ಲಿ ಪ್ರತಿಯೊಬ್ಬರೂ ಕಾಣುವ ಕನಸು ಏನೆಂದರೆ ನಾವು ಯಾವಾಗ ಸಿರಿವಂತರಾಗುವುದು ಎಂದು. ಅದರಲ್ಲಿಯೂ ಬಹಳ ಬೇಗ ಸಿರಿವಂತರಾಗಬೇಕು ಎಂಬ ಆಕಾಂಕ್ಷೆ ಎಲ್ಲರದ್ದೂ ಕೂಡ. ಹಾಗಂತ ಸಂಪತ್ತು ಸೃಷ್ಟಿಸುವುದು ಸುಲಭದ ಕೆಲಸವಲ್ಲ. ಅದಕ್ಕೆ ಸಮಯ-ಸಂಯಮ ಬೇಕಾಗುತ್ತದೆ ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಸರಿಯಾದ ಕಾರ್ಯತಂತ್ರದ ಅಗತ್ಯವಿರುತ್ತದೆ. ಸುದೀರ್ಘ ಕಾಲಾವಧಿಯ ಹೂಡಿಕೆ ಆಯ್ಕೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಒಂದು ಉತ್ಪನ್ನವಾಗಿ ಮ್ಯುಚ್ಯುಯಲ್ ಫಂಡ್ ಹೂಡಿಕೆಗೆ ಅತ್ಯುತ್ತಮ ಮಾರ್ಗ ಎಂಬುದು ಜಾಗತಿಕವಾಗಿ ಸಾಬೀತಾಗಿದೆ. ಈ ಕ್ಷೇತ್ರದಲ್ಲಿ ಹೂಡಿಕೆ ಮಾಡುವ ಆಯ್ಕೆ ಮಾಡಿಕೊಂಡರೆ ಹೂಡಿಕೆದಾರಿಗೆ ಇದರ ಬಗ್ಗೆ ತಕ್ಕಮಟ್ಟಿನ ಜ್ಞಾನವಿದೆ ಎಂದೇ ಭಾವಿಸಲಾಗುತ್ತದೆ.

ಇಲ್ಲಿವರೆಗಿನ ಮಾರಾಕಟ್ಟೆಯ ನಾಡಿಮಿಡಿತವನ್ನು ಅರಿತವರಿಗೆ ಒಂದು ವಿಷಯವಂತೂ ಅರ್ಥವಾಗಿರುತ್ತದೆ. ಭಾರತದಲ್ಲಿ ಮ್ಯುಚ್ಯುಯಲ್ ಫಂಡ್ ಉದ್ಯಮವು ಅನೇಕ ಏರಿಳಿತಗಳ ನಡುವೆ ಗಮನಾರ್ಹವಾದ ಪ್ರಗತಿಯನ್ನು ಕಾಣುತ್ತಿದೆ ಎನ್ನುವುದು. 2022ರ ಮೇ ತಿಂಗಳ ಅಂತ್ಯದ ಹೊತ್ತಿಗೆ ಈ ರಂಗದಲ್ಲಿನ ಒಟ್ಟು ಮಾರುಕಟ್ಟೆ ಮೌಲ್ಯ 37.22 ಲಕ್ಷ ಕೋಟಿ ರೂ. ಇತ್ತೀಚಿನ ವರ್ಷಗಳಲ್ಲಂತೂ ತೀವ್ರತರದ ಏರಿಕೆ ಕಂಡುಬಂದಿದೆ. ಮ್ಯುಚ್ಯುಯಲ್ ಫಂಡ್‌ನಿಂದ ಸಾಕಷ್ಟು ದೂರವೇ ಉಳಿದಿದ್ದ ಅನೇಕ ಹೂಡಿಕೆದಾರರು ಈಗ ತಮ್ಮ ಹೂಡಿಕೆಯ ಪಟ್ಟಿಯಲ್ಲಿ ಇದನ್ನು ಸೇರಿಸಿಕೊಂಡಿದ್ದಾರೆ ಎಂಬುದು ಸತ್ಯ. ವ್ಯವಸ್ಥಿತ ಹೂಡಿಕೆ ಯೋಜನೆ (ಎಸ್‌ಐಪಿ) ಇತ್ತೀಚೆಗಂತೂ ಅತ್ಯಂತ ಜನಪ್ರಿಯ ಆಯ್ಕೆಗಳಾಗಿದೆ. ಭಾರತದಲ್ಲಿ ಅನೇಕ ಜನಪ್ರಿಯ ಕ್ರಿಕೆಟ್ ತಾರೆಯರನ್ನು ಒಳಗೊಂಡ 'ಮ್ಯುಚ್ಯುಯಲ್ ಫಂಡ್ ಸರಿಯಿದೆ' ಎಂಬ ಜಾಹೀರಾತು ಬಹಳಷ್ಟು ಸದ್ದು ಮಾಡಿರುವುದನ್ನು ಗಮನಿಸಿರುತ್ತೀರಿ. ಈ ಹಿನ್ನೆಲೆಯಲ್ಲಿ ಭಾರತದಲ್ಲಿ ಮ್ಯುಚ್ಯುಯಲ್ ಫಂಡ್ ಬರೋಬ್ಬರಿ ಪ್ರಗತಿಯನ್ನು ಕಂಡಿದೆ ಎನ್ನುವುದರಲ್ಲಿ ಯಾವುದೇ ಅನುಮಾನವಿಲ್ಲ. ಹೂಡಿಕೆದಾರರ ನೆಲೆ ಕೂಡ ವೃದ್ಧಿಯಾಗುತ್ತಿದೆ. ಇರಿಂದಾಗಿ ಬಂಡವಾಳ ಮಾರುಕಟ್ಟೆಯ ಜೊತೆ ಜೊತೆಗೆ ತಂತ್ರಜ್ಞಾನದಲ್ಲಿಯೂ ಪ್ರಗತಿ

ಕಾಣುತ್ತಿದೆ. ಇದೇ ಸಂದರ್ಭದಲ್ಲಿ ಮ್ಯುಚ್ಯುಯಲ್ ಫಂಡ್ ಮೇಲಿನ ನಿಯಂತ್ರಣ ಕೂಡ ಬಿಗಿಗೊಳ್ಳುತ್ತಿದೆ. ಈ ಕಾರಣದಿಂದ ಅದು ಹೆಚ್ಚು ಪಾರದರ್ಶಕವೂ ಹೂಡಿಕೆದಾರರ ಸ್ನೇಹಿಯೂ ಆಗುತ್ತಿದೆ. ಇವತ್ತಿನ ದಿನಗಳಲ್ಲಿ ಮ್ಯುಚ್ಯುಯಲ್ ಫಂಡ್‌ನಲ್ಲಿ ಹೂಡಿಕೆ ಮಾಡುವುದು ಕೂಡ ಸುಲಭದ ಕೆಲಸವಾಗಿದ್ದು ಪ್ರತಿಯೊಬ್ಬರೂ ಪಡೆದುಕೊಳ್ಳಬಹುದಾಗಿದೆ.

ಆದರೆ ಇಡೀ ವಿಶ್ವಕ್ಕೆ ಹೋಲಿಸಿದರೆ ಭಾರತದ ಸ್ಥಿತಿ ಹೇಗಿದೆ? ಎಂಬ ಪ್ರಶ್ನೆಯನ್ನು ನಾವು ಕೇಳಿಕೊಂಡರೆ ನಾವಿನ್ನೂ ತೀರಾ ಕೆಳಹಂತದಲ್ಲಿದ್ದೇವೆ ಎಂಬುದು ಸಾಬೀತಾಗುತ್ತದೆ. ಭಾರತದಲ್ಲಿ ಜಿಡಿಪಿ ಅನುಪಾತಕ್ಕೆ ಹೋಲಿಸಿದರೆ ಮ್ಯುಚ್ಯುಯಲ್ ಫಂಡ್ ಪ್ರಮಾಣ ಶೇ.15ರಷ್ಟಿದೆ. ಆದರೆ ಜಾಗತಿಕ ಸರಾಸರಿ ಶೇ.76ರಷ್ಟಿದೆ. ಹಾಗಾಗಿ ನಾವಿನ್ನೂ ಅಪೇಕ್ಷಿತ ಮಟ್ಟವನ್ನು ತಲುಪಿಲ್ಲ ಎನ್ನುವುದು ಅರಿವಾಗುತ್ತದೆ. ಅಮೆರಿಕ, ಕೆನಡಾ ಮತ್ತು ಆಸ್ಟ್ರೇಲಿಯಾದಂತಹ ರಾಷ್ಟ್ರಗಳಲ್ಲಿ ಮ್ಯುಚ್ಯುಯಲ್ ಫಂಡ್‌ನ್ನು ಜಿಡಿಪಿ ಅನುಪಾತಕ್ಕೆ ಹೋಲಿಸಿದರೆ ಶೇ.100ನ್ನು ದಾಟುತ್ತದೆ. ಭಾರತದಲ್ಲಿ ಹೋಲಿಕೆ ಮಾಡಬಹುದಾದದ್ದು ಕೇವಲ ನಿಶ್ಚಿತ ಠೇವಣಿಗಳಿಗೆ ಮಾತ್ರ. ಅದು ಮ್ಯುಚ್ಯುಯಲ್ ಫಂಡ್‌ಗಿಂತ ಸುಮಾರು ಐದು ಪಟ್ಟು ಹೆಚ್ಚಿದೆ. ಹಾಗಾಗಿ ಭಾರತದಲ್ಲಿ ಮ್ಯುಚ್ಯುಯಲ್ ಫಂಡ್ ಉದ್ಯಮವು ಇನ್ನೂ ಸಾಕಷ್ಟು ಪ್ರಮಾಣದಲ್ಲಿ ಬೆಳೆಯಬೇಕಾಗಿದೆ. ಬ್ಯಾಂಕ್ ಠೇವಣಿಗಳ



ಜೊತೆಗೂ ಅದನ್ನು ಹೋಲಿಸಲು ಸಾಧ್ಯವಿಲ್ಲ. 'Consumer spending Outlook 2022' ನಲ್ಲಿ ಪ್ರಕಟವಾದ ವರದಿಯ ಪ್ರಕಾರ 2022–23ರ ಹೊತ್ತಿಗೆ ಮ್ಯುಚ್ಯುಯಲ್ ಫಂಡ್‌ನಲ್ಲಿ ಭಾರತೀಯರು ಹೂಡಿಕೆ ಮಾಡಬಹುದಾದ ಪ್ರಮಾಣ ಶೇ.31ರಷ್ಟು ಮಾತ್ರ. ಈಗಿನ ಹೂಡಿಕೆ ಮಾಡುವ ಜನರ ಪ್ರಮಾಣಕ್ಕೆ ಹೋಲಿಕೆ ಮಾಡಿದರೆ ಇದು ತೀರಾ ಕಡಿಮೆ. ಇಂದಿಗೂ ಲಕ್ಷಾಂತರ ಮಂದಿ ಭಾರತೀಯರು ಕೆಲವೇ ಕೆಲವು ಕಾರಣಗಳಿಗಾಗಿ ಇಂದಿಗೂ ಮ್ಯುಚ್ಯುಯಲ್ ಫಂಡ್‌ನಲ್ಲಿ ಹೂಡಿಕೆ ಮಾಡಿಲ್ಲ. ಇದಕ್ಕೆ ನಿಜಕ್ಕೂ ಕಾರಣಗಳೇನು ಎಂಬುದನ್ನು ಈ ಲೇಖನದ ಮೂಲಕ ಕಂಡುಕೊಳ್ಳುವ ಪ್ರಯತ್ನ ಮಾಡಲಾಗಿದೆ.

ಮ್ಯುಚ್ಯುಯಲ್ ಫಂಡ್ ನಿಮ್ಮ ಬಂಡವಾಳ ಪಟ್ಟಿಯ ಭಾಗವಾಗದೇ ಇರಲು ಕಾರಣವೇನು ಎಂಬುದನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಮೊದಲು ಮಾಡಬಹುದು.

ಮ್ಯುಚ್ಯುಯಲ್ ಫಂಡ್ ಅರಿವು ಇಲ್ಲದಿರುವುದು: ಭಾರತದಲ್ಲಿ ಮ್ಯುಚ್ಯುಯಲ್ ಫಂಡ್ ತನ್ನ ಅಸ್ತಿತ್ವವನ್ನು ಪಡೆದುಕೊಂಡು ಇಪ್ಪತ್ತೈದು ವರ್ಷಗಳೇ ಕಳೆದುಹೋಗಿವೆ. ಆದರೂ ಇದರ ಬಗೆಗಿನ ತಿಳುವಳಿಕೆ ಕೇವಲ ಒಂದು ಮತ್ತು ಎರಡನೇ ಹಂತದ ನಗರಗಳಿಗೆ ಮಾತ್ರ ಸೀಮಿತವಾಗಿದೆ. ಈಗಲೂ ಸುಶಿಕ್ಷಿತರೂ ಸೇರಿದಂತೆ ಅನೇಕ ಮಂದಿ ಭಾರತೀಯರಿಗೆ, ಮ್ಯುಚ್ಯುಯಲ್ ಫಂಡ್ ಹೇಗೆ ಕೆಲಸ ಮಾಡುತ್ತದೆ, ಅದು ಎಷ್ಟು ಲಾಭದಾಯಕ ಎಂಬ ಸಂಗತಿಯ ಅರಿವಿಲ್ಲ. ಇತ್ತೀಚೆಗೆ ಸಮೂಹ ಮಾಧ್ಯಮದಲ್ಲಿ ವ್ಯಾಪಕ ಪ್ರಮಾಣದಲ್ಲಿ ಪ್ರಚಾರ ನಡೆಸಿದ್ದರ ಪರಿಣಾಮವಾಗಿ ಮ್ಯುಚ್ಯುಯಲ್ ಫಂಡ್ ನಮ್ಮ ದೇಶದಲ್ಲಿಯೂ ಇದೆ ಮತ್ತು ಸರಿಯಾದ ಹೂಡಿಕೆಯ ದಾರಿ ಎಂಬುದು ಅನೇಕರ ಗಮನಕ್ಕೆ ಬಂದಿದೆ. ಉಳಿದ ರಾಷ್ಟ್ರಗಳಿಗೆ ಹೋಲಿಸಿದರೆ ಭಾರತದ ಸಮಾಜ ಭಿನ್ನವಾಗಿದೆ. ಇಲ್ಲಿ ಜನ ಮಾಡುವ ಉಳಿತಾಯ ಹಾಗೂ ಹೂಡಿಕೆಗಳ ಬಗ್ಗೆ ಯಾರೂ ಮುಕ್ತವಾಗಿ ಮಾತನಾಡುವುದಿಲ್ಲ. ಸಿರಿವಂತರಾಗುವುದು ಮತ್ತು ಹಣವನ್ನು ಮಾಡುವ ಬಗ್ಗೆಯೂ ನಾವು ಅಷ್ಟೇನೂ ಮುಕ್ತವಾಗಿ ಚರ್ಚಿಸಲು ಹೋಗುವುದಿಲ್ಲ. ಬಹುಷಃ ಹೊಸ ಉತ್ಪನ್ನಗಳ ಬಗ್ಗೆ ಪರಿಶೋಧನೆ ನಡೆಸುವುದು ಮತ್ತು ಅಪಾಯಕ್ಕೆ ಮುಖಾಮುಖಿಯಾಗುವ ಬಗ್ಗೆಯೂ ನಾವು ಸಾಂಸ್ಕೃತಿಕ ಹಾಗೂ ಸಾಂಪ್ರಾದಾಯಿಕವಾಗಿಯೂ ಸಹಜವಾದ ಕುತೂಹಲವನ್ನು ತೋರಿಸುತ್ತಿಲ್ಲ. ಈ ಕಾರಣದಿಂದಲೇ ತಮ್ಮ ಹಣವನ್ನು ಬ್ಯಾಂಕ್ ಎಫ್.ಡಿ.ಗಳಲ್ಲಿ ಹೂಡಿಕೆ ಮಾಡುವುದೇ ಸರಿಯಾದ ಮಾರ್ಗ, ಅದನ್ನೇ ಮುಂದುವರಿಸೋಣ ಎಂದು ಈಗಲೂ ಅನೇಕ ಮಂದಿ ಭಾರತೀಯರು ಭಾವಿಸುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಸಾಕಷ್ಟು ಬದಲಾವಣೆ–ಸುಧಾರಣೆಗಳು ಆಗಿವೆ. ಆದರೆ ನಾವು ಕ್ರಮಿಸಬೇಕಾದ ದಾರಿ ಇನ್ನೂ ಬಹಳ ಸುದೀರ್ಘವಿದೆ.

ಮಾರುಕಟ್ಟೆ ಆಧಾರಿತ ಉತ್ಪನ್ನಗಳಲ್ಲಿ ಭರವಸೆ ಇಲ್ಲದಿರುವುದು: ಸಾಮಾನ್ಯವಾಗಿ ಮ್ಯುಚ್ಯುಯಲ್ ಫಂಡ್ ಬಗ್ಗೆ ಜಾಹೀರಾತು ಟೀವಿಯಲ್ಲಿ ಪ್ರಸಾರವಾಗುವಾಗ ಅಥವಾ ಪತ್ರಿಕೆಗಳಲ್ಲಿ ಪ್ರಕಟವಾದಾಗ ಕೊನೆಯಲ್ಲಿ ಒಂದು ಘೋಷಣೆ ಇರುವುದನ್ನು ಕಾಣುತ್ತೇವೆ: "ಮ್ಯುಚ್ಯುಯಲ್ ಫಂಡ್‌ಗಳು ಮಾರುಕಟ್ಟೆ ಸಂಬಂಧಿತ ಅಪಾಯಕ್ಕೆ ಒಳಪಟ್ಟಿದೆ. ಯೋಜನೆಗೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ಅತ್ಯಂತ ಎಚ್ಚರಿಕೆಯಿಂದ ಓದಿ" ಎಂಬ ಸಂದೇಶ. ಇದನ್ನು ಕೇಳಿದ ಅಥವಾ ಓದಿದ ಅನೇಕ ಮಂದಿ ಹೂಡಿಕೆದಾರರಿಗೆ ಭಯ ಆತಂಕ ಶುರುವಾಗುತ್ತದೆ. ಮ್ಯುಚ್ಯುಯಲ್ ಫಂಡ್‌ನಲ್ಲಿ ಹೂಡಿಕೆ ಮಾಡುವುದೇ ಬೇಡ ಎಂದು ಸುಮ್ಮನಾಗಿ ಬಿಡುತ್ತಾರೆ. ಬಹುತೇಕ ಭಾರತೀಯರಿಗೆ 'ಗ್ಯಾರೆಂಟಿ' (ಖಾತರಿ) ಎಂಬ ಪದದ ಬಗ್ಗೆ ಭಾರೀ ಪ್ರೀತಿ. ಯಾವುದು ಮಾರುಕಟ್ಟೆ ಲಿಂಕ್ ಆಗಿದೆಯೋ ಮತ್ತು ಯಾವುದು ಏರಿಳಿತಗಳನ್ನು ಹೊಂದಿದೆಯೋ ಅದು ಅವರಿಗೆ ಯಾವತ್ತೂ ಅಪಥ್ಯ. ಖಾತರಿಯನ್ನು ನಾವು ದೊಡ್ಡ ಬೆಲೆಯಿಂದಲೇ ಪಡೆಯಬೇಕಾಗುತ್ತದೆ ಎಂಬುದನ್ನು ಹೂಡಿಕೆದಾರರು ಸುಲಭಕ್ಕೆ ಒಪ್ಪಲು ತಯಾರಿಲ್ಲ. ಮ್ಯುಚ್ಯುಯಲ್ ಫಂಡ್‌ನ ಮಾತು ಬಿಡಿ, ಹಣಕಾಸು ಸಾಕ್ಷರತೆ ಮತ್ತು ಜಾಗೃತಿಯೇ ಬಲುದೊಡ್ಡ ಸವಾಲು. ಕೆಲವಷ್ಟು ಜನರಿಗೆ ಮ್ಯುಚ್ಯುಯಲ್ ಫಂಡ್‌ಗಳಲ್ಲಿ ಇರುವ ಲಾಭಗಳ ಬಗ್ಗೆ ಅರಿವಿದೆ. ಅದರಲ್ಲಿರುವ ಈಕ್ವಿಟಿ, ಸಾಲ ಮತ್ತು ಚಿನ್ನವೂ ಸೇರಿದಂತೆ ನಾನಾ ಆಸ್ತಿ ವರ್ಗಗಳಲ್ಲಿ ಹೂಡಿಕೆ ಮಾಡಬಹುದು ಎಂಬುದರ ಬಗ್ಗೆ ತಿಳುವಳಿಕೆ ಇದೆ. ಆದರೂ ಅದರ ಆದಾಯದಲ್ಲಿ ಸ್ಥಿರತೆ ಇಲ್ಲ ಎಂಬುದನ್ನು ಅರಗಿಸಿಕೊಳ್ಳಲು ಬಹುತೇಕರಿಗೆ ಸಾಧ್ಯವಿಲ್ಲ.

ಕಳಪೆ ವಿತರಕರ ಸ್ಪಂದನೆ: ಮ್ಯುಚ್ಯುಯಲ್ ಫಂಡ್ ವಿಚಾರದಲ್ಲಿ ಇರುವ ಇನ್ನೊಂದು ಬಹುದೊಡ್ಡ ಸಮಸ್ಯೆ ಏನೆಂದರೆ ಯಾರನ್ನು ಸಂಪರ್ಕಿಸಬೇಕು ಮತ್ತು ಯಾರು ಸರಿಯಾದ ಮಾರ್ಗದರ್ಶನ ನೀಡುತ್ತಾರೆ ಎನ್ನುವುದು. ಜನರಿಗೆ ಈ ವಿಷಯದಲ್ಲಿ ಅರಿವು ಇದ್ದರೂ ಕೂಡ ಸೇವೆಗಳನ್ನು ಪಡೆಯಲು ಯಾರು ಸರಿಯಾದ ದಾರಿಯನ್ನು ತೋರಿಸುತ್ತಾರೆ ಎನ್ನುವುದೇ ತಿಳಿದಿರುವುದಿಲ್ಲ. ಭಾರತೀಯರ ಮನಸ್ಥಿತಿ ಹೇಗೆಂದರೆ ನಂಬಿಕೆ ಇರುವವರಲ್ಲಿ ಮತ್ತು ಸುಲಭವಾಗಿ ಸಂಪರ್ಕಕ್ಕೆ ಸಿಗುವವರಲ್ಲಿ ಮಾತ್ರ ಅವರು ಹೂಡಿಕೆ ಮಾಡಲು ಇಷ್ಟಪಡುತ್ತಾರೆ. ಹಾಗಾಗಿ ಮಧ್ಯವರ್ತಿಗಳ ಪಾತ್ರ ಹೆಚ್ಚು ಮಹತ್ವದ್ದಾಗಿರುತ್ತದೆ. ದುರಾದೃಷ್ಟದ ಸಂಗತಿ ಎಂದರೆ ಮ್ಯುಚ್ಯುಯಲ್ ಫಂಡ್ ಕ್ಷೇತ್ರವನ್ನು ಆದ್ಯತೆಯಿಂದ ಮುನ್ನಡೆಸಿಕೊಂಡು ಹೋಗುವವರ ಕೊರತೆಯಂತೂ ಇದೆ. ಈಗಲೂ ಅನೇಕ ಪಟ್ಟಣಗಳಲ್ಲಿ ಸರಿಯಾದ ವಿತರಕರೇ ಇಲ್ಲದಂತಹ ಪರಿಸ್ಥಿತಿ ಇದೆ.

ಇದು ಯಾಕೆ ಮುಖ್ಯವಾದ ಸಂಗತಿ ಎಂದರೆ ವಿತರಕರು ಮ್ಯುಚ್ಯುಯಲ್ ಫಂಡ್‌ಗೆ ಅಗತ್ಯವಿರುವ ಜಾಗೃತಿಯನ್ನು ಹುಟ್ಟುಹಾಕುವಲ್ಲಿ, ಭರವಸೆಯನ್ನು ತುಂಬುವಲ್ಲಿ ನೆರವಾಗುತ್ತಾರೆ. ಹೂಡಿಕೆದಾರರು ಮ್ಯುಚ್ಯುಯಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವಂತೆ ಕೈಹಿಡಿದು ಮುನ್ನಡೆಸುವ ಕೆಲಸವನ್ನು ಅವರು ನಿರ್ವಹಿಸುತ್ತಾರೆ. ಈಗಿರುವ ಹೂಡಿಕೆದಾರರಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಹೂಡಿಕೆದಾರರನ್ನು ಪರಿಚಯ ಮಾಡಿಸುವಲ್ಲಿ ವಿತರಕರು ಯಶಸ್ವಿಯಾಗಿದ್ದಾರೆ. ಸಕ್ರಿಯ ಮತ್ತು ಗುಣಮಟ್ಟದ ವಿತರಕರು ಇಲ್ಲದೇ ಹೋದರೆ ಮ್ಯುಚ್ಯುಯಲ್ ಫಂಡ್‌ನ್ನು ಹೆಚ್ಚು ಹೆಚ್ಚು ಜನರಿಗೆ ಮುಟ್ಟಿಸುವುದು ಕಷ್ಟವಾಗುತ್ತದೆ.

ಹೂಡಿಕೆ ವಿಧಾನ ತಿಳಿಯದಿರುವುದು: ಇತ್ತೀಚಿನ ದಿನಗಳಲ್ಲಿ ಅನೇಕ ಮಂದಿಗೆ ಮ್ಯುಚ್ಯುಯಲ್ ಫಂಡ್ ಎಂದರೆ ಏನು ಎಂಬುದು ತಿಳಿದಿದೆ. ಆದರೆ ಹೇಗೆ ಮತ್ತು ಎಲ್ಲಿ ಹೂಡಿಕೆ ಮಾಡಬೇಕು ಎಂಬ ಸಂಗತಿ ತಿಳಿದಿರುವುದಿಲ್ಲ. ಹಾಗಾಗಿ ಅವರು ಹೂಡಿಕೆ ಮಾಡುವುದನ್ನು ತಪ್ಪಿಸುತ್ತಾರೆ. ನಾನಾ ರೀತಿಯ ಹೂಡಿಕೆದಾರರ ಅಗತ್ಯಗಳಿಗೆ ತಕ್ಕಂತೆ ಮ್ಯುಚ್ಯುಯಲ್ ಫಂಡ್‌ನ ನೂರಾರು ಯೋಜನೆಗಳು ಮಾರುಕಟ್ಟೆಯಲ್ಲಿ ಲಭ್ಯವಿವೆ. ಆದರೆ ಕೆಲವೊಮ್ಮೆ ಹೀಗೆ ಲಭ್ಯವಿರುವುದರಿಂದಲೇ ಹೂಡಿಕೆದಾರರಿಗೆ ಗೊಂದಲ ಉಂಟಾಗುವ ಸಾಧ್ಯತೆ ಇರುತ್ತದೆ. ಅವರ ವಯಸ್ಸು, ಹಣಕಾಸು ಸ್ಥಿತಿಗತಿ, ಅಪಾಯವನ್ನು ಜೀರ್ಣಿಸಿಕೊಳ್ಳುವ ಸಾಮರ್ಥ್ಯ ಮತ್ತು ಇತರ ಅಂಶಗಳಿಗೆ ತಕ್ಕುದಾದ ಫಂಡ್ ಅಥವಾ ಯೋಜನೆಯನ್ನು ಆರಿಸಿಕೊಳ್ಳುವುದು ಕೂಡ ಕಷ್ಟವಾಗಿರಬಹುದು. ಇಷ್ಟು ಮಾತ್ರವಲ್ಲದೆ ಈ ದಿನಗಳಲ್ಲಿ ಅಸಂಬದ್ಧ ಮತ್ತು ಅನಗತ್ಯ ಮಾಹಿತಿ




ಕೂಡ ಹರಿದಾಡುತ್ತಿರುತ್ತವೆ. ವಿತರಕರನ್ನು ನೇರವಾಗಿ ಸಂಪರ್ಕಿಸಲು ಸಾಧ್ಯವಾಗದೇ ಇರುವವರು ಅನೇಕ ಸೈಟ್‌ಗಳಲ್ಲಿ ಲಭ್ಯವಿರುವ ಉನ್ನತ ನಿರ್ವಹಣೆಯ ಫಂಡ್‌ಗಳಲ್ಲಿ ಮಾತ್ರ ಹೂಡಿಕೆಯನ್ನು ಮಾಡುತ್ತಾರೆ. ಅಂಥವರು ಸರಿಯಾದ ಮಾರ್ಗದರ್ಶನವಿಲ್ಲದೆ ತಮ್ಮ ಕೈಗಳನ್ನು ಸುಟ್ಟುಕೊಳ್ಳುತ್ತಾರೆ. ಕೊನೆಗೆ ಕೆಲಕಾಲದ ಬಳಿಕ ಈ ಮ್ಯುಚ್ಯುಯಲ್ ಫಂಡಿನ ಸಹವಾಸವೇ ಬೇಡ ಎಂದು ದೂರ ಉಳಿದುಬಿಡುತ್ತಾರೆ. ಡಿಜಿಟಲ್ ಸಾಕ್ಷರತೆ ಎನ್ನುವುದು ಅನೇಕ ಭಾರತೀಯರನ್ನು ಕಟ್ಟಿಹಾಕುವಂತೆ ಮಾಡಿದೆ. ಇಷ್ಟೊಂದು ವರ್ಷಗಳ ಬಳಿಕವೂ ಜನ ನೆಟ್ ಬ್ಯಾಂಕಿಂಗ್ ಮತ್ತು ಆನ್‌ಲೈನ್ ಪಾವತಿಯನ್ನು ಬಳಸಲು ಹಿಂಜರಿಯುತ್ತಿರುವುದನ್ನು ಗಮನಿಸಬಹುದು.

**ಒಟ್ಟಾರೆ: ಮ್ಯುಚ್ಯುಯಲ್ ಫಂಡ್ ವಿಷಯದಲ್ಲಿ ಒಟ್ಟಾರೆಯಾಗಿ ಹೇಳಬೇಕೆಂದರೆ ಕೆಲವು ಮಿಥ್ಯೆಗಳನ್ನು ತೆಗೆದುಹಾಕುವುದರಿಂದ ನಿಮಗೆ ನೀವು ಮತ್ತು ನಿಮ್ಮ ಸುತ್ತ ಇರುವವರಿಗೆ ಅರಿವು ಮೂಡಿಸುವುದರಿಂದ ಹಣಕಾಸು ಸಾಕ್ಷರತೆಯಲ್ಲಿ ಬದಲಾವಣೆಯನ್ನು ತರಲು ಸಾಧ್ಯವಾಗುತ್ತದೆ. ಇದರಿಂದ ಮ್ಯುಚ್ಯುಯಲ್ ಫಂಡ್ ಬಗ್ಗೆ ಇರುವ ಅನೇಕ ತಪ್ಪು ಗ್ರಹಿಕೆಗಳನ್ನು ನಿವಾರಣೆ ಮಾಡಬಹುದಾಗಿದೆ. ಅಗತ್ಯವಿದ್ದರೆ ನೀವು ನಿಮ್ಮ ಹಣಕಾಸು ಉತ್ಪನ್ನದ ಮಾರ್ಗದರ್ಶಕರ/ವಿತರಕರ ಸಹಾಯವನ್ನು ಪಡೆದುಕೊಳ್ಳಬಹುದು. ಮ್ಯುಚ್ಯುಯಲ್ ಫಂಡ್ ವಿಷಯದಲ್ಲಿ ನಿರ್ಧಾರ ಕೈಗೊಳ್ಳುವಾಗ ನಿಮಗೆ ಸಾಕಷ್ಟು ಮಾಹಿತಿಗಳು ತಿಳಿದಿರಲಿ ಮತ್ತು ನಿಮ್ಮ ಸುತ್ತ ಇರುವವರಿಗೂ ಅರಿವನ್ನು ಮೂಡಿಸಿ. ಇದರಿಂದ ಮ್ಯುಚ್ಯುಯಲ್ ಫಂಡ್ ಬಗ್ಗೆ ಕ್ರಮೇಣ ಸಾಧ್ಯವಾಗುತ್ತದೆ.**

## ವಿದೇಶ ಪ್ರವಾಸದ ಜೊತೆಗಿರಲಿ




ಮಕ್ಕಳಿರಲಿ, ದೊಡ್ಡವರಿರಲಿ ಪ್ರತಿಯೊಬ್ಬರಿಗೂ ಮನೆಯೇ ನಿಜವಾದ ಸ್ವರ್ಗ.ಅದಕ್ಕಿಂತ ಆರಾಮವಾದುದು ಇನ್ನೊಂದಿಲ್ಲ. ಆದರೆ ನಾವು ಮನೆಯನ್ನು ತೊರೆದು ಇನ್ನೊಂದು ನಗರ ಅಥವಾ ಇನ್ನೊಂದು ರಾಜ್ಯಕ್ಕೆ ಪ್ರಯಾಣ ಬೆಳೆಸುವ ಸಂದರ್ಭದಲ್ಲಿ ಸಾಕಷ್ಟು ಸಿದ್ಧತೆಗಳನ್ನು ಮಾಡಿಕೊಳ್ಳುತ್ತೇವೆ. ಪ್ರಯಾಣದ ಸಂದರ್ಭದಲ್ಲಿ ಯಾವುದೇ ತೊಂದರೆಗಳು ಉಂಟಾಗದಿರಲಿ ಎಂಬ ಕಾರಣಕ್ಕೆ ಈ ತಯಾರಿಗಳನ್ನು ಮಾಡಿಕೊಳ್ಳುತ್ತೇವೆ. ಆದರೆ ಇನ್ನೊಂದು ದೇಶಕ್ಕೆ ಪ್ರಯಾಣ ನಿಗದಿಯಾಯಿತೆಂದರೆ ನಮ್ಮ ದಾವಂತ, ನಮ್ಮ ಸಿದ್ಧತೆ ಎಲ್ಲವೂ ತೀವ್ರಗೊಳ್ಳುತ್ತದೆ. ಯಾಕೆ?

ಯಾಕೆಂದರೆ ಅದು ನಮ್ಮ ದೇಶ ಅಲ್ಲ. ಅಲ್ಲಿ ಏನು ಬೇಕಾದರೂ ಸಂಭವಿಸಬಹುದು. ಯಾವುದೇ ತೊಂದರೆಗೆ ನಾವು ಸಿಕ್ಕಿಹಾಕಿಕೊಳ್ಳಬಹುದು. ಅನಾರೋಗ್ಯಕ್ಕೆ ಗುರಿಯಾಗಬಹುದು, ಅಪಘಾತ ಸಂಭವಿಸಬಹುದು, ನಾವು ಕೊಂಡೊಯ್ದ ಬ್ಯಾಗೇಜ್‌ಗಳನ್ನು ಕಳೆದುಕೊಳ್ಳಬಹುದು ಇತ್ಯಾದಿ. ಇಂತಹ ಸಂದರ್ಭದಲ್ಲಿ ನಾವು ಆತಂಕಕ್ಕೆ ಒಳಗಾಗುತ್ತೇವೆ, ಭಯಭೀತರಾಗುತ್ತೇವೆ. ಮುಂದೇನು ಮಾಡಬೇಕು ಎಂದು ನಮಗೆ ತಿಳಿಯದೇ ಹೋಗಬಹುದು.

**ಅಂತಾರಾಷ್ಟ್ರೀಯ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಕ್ಲೈಮ್‌ಗಳನ್ನು ನಿಭಾಯಿಸುವಲ್ಲಿ ಈ ವಿಮಾ ಸಂಸ್ಥೆಗಳು ಜಾಗತಿಕ ತಜ್ಞರನ್ನು ಹೊಂದಿರುತ್ತವೆ.**

ಪ್ರತಿವರ್ಷ ಅನೇಕ ಮಂದಿ ವಿದ್ಯಾರ್ಥಿಗಳು ವಿಶ್ವದ ಉದ್ದಗಲಕ್ಕೂ ಇರುವ ನಾನಾ ದೇಶಗಳಿಗೆ ಉನ್ನತ ಶಿಕ್ಷಣಕ್ಕಾಗಿ ಪ್ರಯಾಣ ಮಾಡುತ್ತಲೇ ಇರುತ್ತಾರೆ. ಮನೆಯಿಂದ ತಿಂಗಳು/ ವರ್ಷಗಳ ಕಾಲ ದೂರ ಇರುವ ಮಕ್ಕಳ ಬಗ್ಗೆ ಪಾಲಕರು ಯಾವತ್ತೂ ಚಿಂತಿತರಾಗುತ್ತಾರೆ. ವಿದೇಶಕ್ಕೆ ಹೋದ ಮಕ್ಕಳು ಶಿಕ್ಷಣದ ಮೇಲೆ ಹೆಚ್ಚಿನ ಗಮನವನ್ನು ನೀಡಬೇಕೇ ಹೊರತು ಅಲ್ಲಿ ಉಂಟಾಗುವ ಸಮಸ್ಯೆಗಳಿಂದ ತೊಂದರೆಗೆ ಒಳಗಾಗಬಾರದು ಎಂಬುದು ಪಾಲಕರ ಆದ್ಯತೆಯಾಗಿರುತ್ತದೆ.

ಇದಕ್ಕೆ ಉತ್ತಮ ಮಾರ್ಗ ಎಂದರೆ ಪ್ರಯಾಣ ವಿಮೆ ಮಾಡುವುದು. ಸಾಮಾನ್ಯವಾಗಿ ಈ ವಿಮೆಯಲ್ಲಿ ಅಪಘಾತ ಅಥವಾ ವೈದ್ಯಕೀಯ, ಆಸ್ಪತ್ರೆಗೆ ದಾಖಲು, ಬ್ಯಾಗೇಜ್ ಅಥವಾ ಪಾಸ್‌ಪೋರ್ಟ್ ಕಳೆದುಹೋಗುವುದು, ವಿಮಾನ ಪ್ರಯಾಣದಲ್ಲಿ ವಿಳಂಬವಾಗುವುದು ಅಥವಾ ರದ್ದಾಗುವುದು, ತುರ್ತು ಹಣಕಾಸಿನ ಅಗತ್ಯತೆ/ಕಾನೂನಿನ ಸಹಾಯ ಇತ್ಯಾದಿಗಳನ್ನು ಕ್ಲೈಮ್ ಮಾಡಿಕೊಳ್ಳಬಹುದು. ಇಂತಹ ಸಂದರ್ಭಗಳಲ್ಲಿ ವಿದೇಶಿ ನೆಲದಲ್ಲಿ ವಿದ್ಯಾರ್ಥಿಗಳಿಗೆ ಸಹಾಯ ಮಾಡುವಂತಹ ಅಗತ್ಯವಿರುತ್ತದೆ.




ಹಾಗಾಗಿ ವಿದ್ಯಾರ್ಥಿ ಪ್ರಯಾಣ ವಿಮೆಯನ್ನು ಸ್ಥಾಪಿಸುವ ಅಗತ್ಯವನ್ನು ಮನಗಾಣಲಾಗಿದೆ.

ವಿದೇಶಿ ನೆಲದಲ್ಲಿ ಯಾವುದೇ ಸಂದರ್ಭದಲ್ಲಿ ಸಂಭವಿಸಬಹುದಾದ ಅನಿರೀಕ್ಷಿತ ಘಟನೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಸಹಾಯ ಮಾಡುವ ಉದ್ದೇಶದಿಂದಲೇ ಪ್ರಯಾಣ ವಿಮೆಯನ್ನು ರೂಪಿಸಲಾಗಿದೆ. ಇಂತಹುದೊಂದು ಸಹಾಯದಿಂದಾಗಿ ವಿದ್ಯಾರ್ಥಿಗಳು ತಮ್ಮ ಅಧ್ಯಯನಕ್ಕೆ ಹೆಚ್ಚು ಗಮನವನ್ನು ನೀಡಿ ತಮ್ಮ ಗುರಿಗಳನ್ನು ಸಾಧಿಸಲು ಸಾಧ್ಯವಾಗುತ್ತದೆ.

ಬಹುತೇಕ ಸಂದರ್ಭಗಳಲ್ಲಿ ವಿದೇಶಗಳಲ್ಲಿ ಜೀವನ ವೆಚ್ಚ, ಶಿಕ್ಷಣ ಶುಲ್ಕಗಳು, ಸಾರಿಗೆ ಮತ್ತು ವೈದ್ಯಕೀಯ ಚಿಕಿತ್ಸೆಯಂತಹ ವೆಚ್ಚಗಳು ಭಾರತಕ್ಕಿಂತ ಅಧಿಕ. ಇಂತಹ ಮಿತಿಮೀರಿದ ವೆಚ್ಚಗಳನ್ನು ಭರಿಸುವಷ್ಟು ವಿದ್ಯಾರ್ಥಿಗಳು ಮತ್ತು ಅವರ ಪಾಲಕರು ಆರ್ಥಿಕವಾಗಿ ಸದೃಢರಾಗಿರುವುದಿಲ್ಲ. ಹಾಗಾಗಿ ಪ್ರಯಾಣ ವಿಮಾ ಪಾಲಿಸಿಯನ್ನು ಮಾಡುವುದರಿಂದ ಅನೇಕ ತಲೆನೋವುಗಳಿಂದ ಪಾರಾಗಬಹುದು. ವಿದ್ಯಾರ್ಥಿ ಪ್ರಯಾಣ ವಿಮೆಯನ್ನು ಒದಗಿಸಲು ವಿಮಾ ಕಂಪನಿಗಳು ವಿಧಿಸುವ ಪ್ರೀಮಿಯಂ ಕೈಗೆಟಕುವಂತಿರುತ್ತದೆ. ಆದ್ದರಿಂದ ಕೆಲವು ವಿದೇಶಿ ಶಿಕ್ಷಣ ಸಂಸ್ಥೆಗಳು ತಮ್ಮ ಸಂಸ್ಥೆಗಳಲ್ಲಿ ಪ್ರವೇಶಾತಿಯನ್ನು ಪಡೆಯಲು ವಿದ್ಯಾರ್ಥಿ ಪ್ರಯಾಣ ವಿಮಾ ಪಾಲಿಸಿ ಪಡೆಯುವುದನ್ನು ಕಡ್ಡಾಯವಾಗಿ ಮಾಡಿವೆ. ಇದರಿಂದ ಈ ಸಂಸ್ಥೆಗಳಲ್ಲಿ ಯಾವುದೇ ತೊಂದರೆ ಇಲ್ಲದ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸಲು ಸಾಧ್ಯವಾಗುತ್ತದೆ.

ಇಂತಹ ವಿದ್ಯಾರ್ಥಿ ಪ್ರಯಾಣ ವಿಮೆಯ ಅವಧಿ ಒಂಭತ್ತು ತಿಂಗಳಿಂದ ಮೂರು ವರ್ಷಗಳಿರುತ್ತದೆ. ಅನೇಕ ವಿಮಾ ಸಂಸ್ಥೆಗಳು ವಿದೇಶಿ ವಿಶ್ವವಿದ್ಯಾಲಯಗಳು ನೀಡಿದ ವಿಶೇಷತೆಗಳ ಆಧಾರದಲ್ಲಿ ಗ್ರಾಹಕರಿಗೆ ತಕ್ಕಂತೆ ಪ್ರಯಾಣ ವಿಮಾ ಪಾಲಿಸಿಗಳನ್ನು ರೂಪಿಸಿರುತ್ತವೆ.

ಇತರ ವಿಮಾ ಪಾಲಿಸಿಗಳ ರೀತಿಯಲ್ಲಿಯೇ ಕೆಲವು ಅಂಶಗಳು ಈ ಪಾಲಿಸಿಯಲ್ಲಿಯೂ ಕವರ್ ಆಗುವುದಿಲ್ಲ. ಸಾಮಾನ್ಯವಾಗಿ ಹೊರತುಪಡಿಸಲಾದ ಸಂಗತಿಗಳೆಂದರೆ ಈ ಹಿಂದೆಯೇ ಇದ್ದ ಕಾಯಿಲೆಗಳು, ಆತ್ಮಹತ್ಯೆ, ಮಾನಸಿಕ ಅಸ್ವಸ್ಥತೆ, ಖಿನ್ನತೆ, ಮಾನಸಿಕ ಒತ್ತಡ, ಮದ್ಯ ಅಥವಾ ಮಾದಕ ವ್ಯಸನ, ಹೆಚ್‌ಐವಿ ಅಥವಾ ಏಡ್ಸ್ ಇತ್ಯಾದಿ.

ಅಂತಾರಾಷ್ಟ್ರೀಯ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಕ್ಲೈಮ್‌ಗಳನ್ನು ನಿಭಾಯಿಸುವಲ್ಲಿ ಈ ವಿಮಾ ಸಂಸ್ಥೆಗಳು ಜಾಗತಿಕ ತಜ್ಞರನ್ನು ಹೊಂದಿರುತ್ತವೆ. ಅವರು ಆಯಾ ದೇಶಗಳಲ್ಲಿ ಅನುಸರಿಸುವ ಅಭ್ಯಾಸಗಳು, ಕಾನೂನು ಮತ್ತು ಭಾಷೆಗಳ ಬಗೆಗೆ ಜ್ಞಾನವನ್ನು ಪಡೆದಿರುತ್ತಾರೆ. ಕ್ಲೈಮ್‌ಗಳನ್ನು ಮಾಡಲು ಅವರು ಯಾವುದೇ ಸಮಯ ಮತ್ತು ಯಾವುದೇ ದಿನ ತಕ್ಷಣ ಸಹಾಯ ಸಿಗುವಂತಹ ಅಂತಾರಾಷ್ಟ್ರೀಯ ಟೋಲ್-ಫ್ರೀ ನಂಬರ್‌ಗಳನ್ನು ಕಂಪನಿಗಳು ಒದಗಿಸುತ್ತವೆ.

ಈ ಎಲ್ಲ ಹಿನ್ನೆಲೆಯಲ್ಲಿ ಉನ್ನತ ಶಿಕ್ಷಣಕ್ಕಾಗಿ ವಿದೇಶಕ್ಕೆ ಪ್ರಯಾಣ ಬೆಳೆಸುವ ವಿದ್ಯಾರ್ಥಿಗಳು ಇಂತಹುದೊಂದು ವಿಮಾ ಪಾಲಿಸಿಯನ್ನು ತಮ್ಮ ಇತರ ಎಲ್ಲ ಕಡತಗಳ ಜೊತೆ ಇಟ್ಟುಕೊಂಡರೆ ಮಾನಸಿಕ ನೆಮ್ಮದಿ. ವಿದೇಶ ಪ್ರಯಾಣ ಕೈಗೊಳ್ಳುವ ತಮ್ಮ ಮಕ್ಕಳ ಕೈಗೆ ಈ ಪಾಲಿಸಿಯನ್ನು ಕೈಗಿಟ್ಟರೆ ಪಾಲಕರಿಗೂ ನೆಮ್ಮದಿ.


## ಇನ್‌ಸ್ಪೈರ್ ಇಂಡಿಯಾ ವೆಲ್ತ್ ಪ್ರೈವೇಟ್ ಲಿ.

(ARN–79020)

ಎಎಂಎಫ್ಐ ನೋಂದಾಯಿತ ಮ್ಯೂಚುಯಲ್ ಫಂಡ್ ವಿತರಕರು

ನಮ್ಮ ಸಂಪರ್ಕ: 9148319207, 080–42129917

Mail: info@inspireindiafs.com

### ನಮ್ಮ ಸೇವೆಗಳು

1. ಮ್ಯೂಚುಯಲ್ ಫಂಡ್ಸ್
2. ಸ್ಟಾಕ್ ಬ್ರೋಕಿಂಗ್
3. ಫೈನಾನ್ಷಿಯಲ್ ಕನ್ಸಲ್ಟಿಂಗ್ & ಪ್ಲಾನಿಂಗ್
4. ಪ್ರಾಪರ್ಟಿ ಇನ್ವೆಸ್ಟ್‌ಮೆಂಟ್
5. ತೆರಿಗೆ ಉಳಿತಾಯ ಬಾಂಡ್‌ಗಳು
6. ವಿಮೆ
7. ವೆಲ್ತ್ ಮ್ಯಾನೇಜ್‌ಮೆಂಟ್
8. ಹಣಕಾಸು ಮೌಲ್ಯಮಾಪನ
9. ತೆರಿಗೆ ಸಲ್ಲಿಕೆ
10. ವಿಲ್ ಬರವಣಿಗೆ

ವಿಳಾಸ : INSPIRE INDIA WEALTH PVT LTD

@ 65, 'Surasa Enclave', 1st Floor, Puttanna Road, Gandhi Bazar, Basavanagudi, Bengaluru-560004

ಅಸ್ವೀಕಾರ

ಈ ವಾರ್ತಾಪತ್ರದ ಸಂಕಲನ ಮಾಡುವ ಸಂದರ್ಭದಲ್ಲಿ ನಾವು ಎಲ್ಲ ರೀತಿಯ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿರುತ್ತೇವೆ. ಇಲ್ಲಿನ ಮಾಹಿತಿಗಳನ್ನು ಹಲವು ನಂಬಿಕೆಗೆ ಅರ್ಹವಾದ ಮೂಲಗಳಿಂದ ಪಡೆದಿರುತ್ತೇವೆ. ಆದರೆ, ಯಾವುದೇ ಮಾಹಿತಿಯ ಖಚಿತತೆ, ಅರ್ಹತೆ ಅಥವಾ ಪರಿಪೂರ್ಣತೆಯ ಬಗ್ಗೆ ಖಾತರಿಯನ್ನು ನೀಡುವುದಿಲ್ಲ. ಹಾಗಾಗಿ ಇಂತಹ ಮಾಹಿತಿ ಬಳಕೆಯಿಂದ ಆಗಬಹುದಾದ ಯಾವುದೇ ದೋಷ ಅಥವಾ ಲೋಪಗಳಿಗೆ ಜವಾಬ್ದಾರರಾಗಿರುವುದಿಲ್ಲ. ಈ ವಾರ್ತಾಪತ್ರದಲ್ಲಿ ತಿಳಿಸಲಾದ, ಚರ್ಚಿಸಲಾದ ಅಥವಾ ಶಿಫಾರಸ್ಸು ಮಾಡಲಾದ ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ಹೂಡಿಕೆಯನ್ನು ಮಾಡುವ ಸಮರ್ಪಕತೆಯ ಬಗ್ಗೆ ಹೂಡಿಕೆದಾರರು ಸೂಕ್ತವಾದ ಹಣಕಾಸು ಸಲಹೆಗಳನ್ನು ಪಡೆಯಬೇಕು ಮತ್ತು ಭವಿಷ್ಯದ ನಿರೀಕ್ಷೆಗಳ ಬಗ್ಗೆ ನೀಡಿರುವ ಹೇಳಿಕೆಗಳು ಕಾರ್ಯರೂಪಕ್ಕೆ ಬರಬಹುದು ಅಥವಾ ಬಾರದೇ ಇರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮ್ಯೂಚುಯಲ್ ಫಂಡ್ ಹೂಡಿಕೆಗಳು ಯಾವತ್ತೂ ಮಾರುಕಟ್ಟೆಗೆ ಸಂಬಂಧಿಸಿದ ಅಪಾಯದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಹಾಗಾಗಿ ಹೂಡಿಕೆಯನ್ನು ಮಾಡುವುದಕ್ಕೂ ಮುನ್ನ ನಿಮಗೆ ನೀಡಲಾದ ದಾಖಲೆಗಳನ್ನು ದಯವಿಟ್ಟು ಅತ್ಯಂತ ಎಚ್ಚರಿಕೆಯಿಂದ ಓದಿಕೊಳ್ಳಿ. ಹಿಂದಿನ ನಿರ್ವಹಣೆಯ ಕೇವಲ ಸೂಚಕ ಉದ್ದೇಶವನ್ನು ಹೊಂದಿದ್ದು ಅದು ಯಾವುದೇ ಕಾರಣಕ್ಕೂ ಭವಿಷ್ಯದ ಮಾರ್ಗದರ್ಶಕವಾಗಿರುವುದಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.